# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಸ್ಪೆಷಲ್ ಕೇಸ್ ನಂ. 27/2020**

**ದೋ.ಸಾ. : 7 ಫ್ರಾ.ಸಾ. : 2**

| | | |
|---|---|---|
| ಸಾಕ್ಷಿಯ ಹೆಸರು | : | ಮಾಬೂಬಿ |
| ಗಂಡನ ಹೆಸರು | : | ಜುಮ್ಮಾ ಸಾಬ್ |
| ವಯಸ್ಸು | : | 60 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಗುಂಜಾವತಿ, ಮುಂಡಗೋಡ |

**ದಿನಾಂಕಃ 26.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಚಾ.ಸಾ.1 ಕಾಸಿಂ ಸಾಬ್, ಚಾ.ಸಾ.8 ಮಹಮ್ಮದ್ ಹನೀಫ್, ಚಾ.ಸಾ.9 ಮುಸ್ತಾಕ್, ಚಾ.ಸಾ.10 ರಜಾಕ್ ನನ್ನ ಮಕ್ಕಳು. ನಾವು ಪರಿಶಿಷ್ಟ ಪಂಗಡಗಳ (ಸಿದ್ದಿ[ಉತ್ತರ ಕನ್ನಡ]) ಜಾತಿಗೆ ಸೇರಿದವರು. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ, ಅವರು ನಮ್ಮ ಸಂಬಂಧಿಕರು. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹಾಗೂ ಮದುವೆಯ ಊಟದ ಕುರಿತಂತೆ 1 ಮತ್ತು 3 ನೇ ಆರೋಪಿತರು ಚಾ.ಸಾ.9 ರವರ ಜೊತೆಗೆ ಜಗಳ ಮಾಡಿರುವುದಿಲ್ಲ. 1 ನೇ ಆರೋಪಿತನು ನನ್ನ ಮಗ ಚಾ.ಸಾ.9 ರವರಿಗೆ ಕೆನ್ನೆಯ ಮೇಲೆ ಹೊಡೆದಿರುವುದಿಲ್ಲ ಹಾಗೂ 2 ಮತ್ತು 3 ನೇ ಆರೋಪಿತರು ನನ್ನ ಮಗ ಚಾ.ಸಾ.8 ರವರಿಗೆ ಕೈಯಿಂದ ಹೊಡೆದಿರುವುದಿಲ್ಲ ಹಾಗೂ 2 ಮತ್ತು 3 ನೇ ಆರೋಪಿತರು ನನಗೆ ಹೊಡೆದಿರುವುದಿಲ್ಲ ಮತ್ತು ನನ್ನ ಮಾನಕ್ಕೆ ಕುಂದುಂಟುಪಡಿಸಿಲ್ಲ. ನಾನು ಹಾಗೂ ನನ್ನ ಮಗ ಚಾ.ಸಾ.8 ಬೈಕಿನ ಮೇಲೆ ಹೋದಾಗ ಬಿದ್ದು ಪೆಟ್ಟು ಮಾಡಿಕೊಂಡಿದ್ದು, ನಾವು ಚಿಕಿತ್ಸೆಗಾಗಿ ಮುಂಡಗೋಡದ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿ ಪೊಲೀಸರು ಬಂದಿರುತ್ತಾರೆ. ನಾನು ಯಾವುದೇ ಹೇಳಿಕೆ ಅಥವಾ ಮರು ಹೇಳಿಕೆ ನೀಡಿರುವುದಿಲ್ಲ. ನನ್ನ ತಪ್ಪು ಕಲ್ಪನೆಯಿಂದಾಗಿ ನಾನು ಶಿರಸಿ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 5(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-</u>**

2. ದಿನಾಂಕ 14.04.2019 ರಂದು ನನ್ನ ತಂಗಿಯ ಮಗಳ ಮದುವೆಗೆ ನಾನು ಹಾಗೂ ನನ್ನ ಮಕ್ಕಳಾದ ಚಾ.ಸಾ.1, ಚಾ.ಸಾ. 8 ರಿಂದ 10 ಹೋಗಿದ್ದೆವು ಎಂದರೆ ಸರಿಯಲ್ಲ. ಅಲ್ಲಿ ಊಟದ ಸಮಯದಲ್ಲಿ 1 ಮತ್ತು 3 ನೇ ಆರೋಪಿತರು ಹಾಗೂ ನನ್ನ ಮಗ ಚಾ.ಸಾ.9 ರವರ ನಡುವೆ ಊಟದ ಪ್ಲೇಟಿನ ವಿಚಾರದಲ್ಲಿ ಜಗಳ ಆಗಿತ್ತು ಎಂದರೆ ಸರಿಯಲ್ಲ. ದಿನಾಂಕ 15.04.2019 ರಂದು ರಾತ್ರಿ ನನ್ನ ಮಗ ಚಾ.ಸಾ.9, ನನ್ನ ತಂಗಿ ಫಾತಿಮಾ ರವರ ಮನೆಗೆ ಹೋದಾಗ, ಅಲ್ಲಿ 1 ನೇ ಆರೋಪಿತನು ಚಾ.ಸಾ.4 ಶಬ್ಬೀರ್ ಇವರೊಂದಿಗೆ ಮಾತನಾಡುತ್ತಿದ್ದಾಗ ನನ್ನ ಮಗ ಚಾ.ಸಾ.9 ರವನ್ನು ನೋಡಿ ಅವನಿಗೆ "ರಾಂಡಕೇ ಬೇಟೆ " ಎಂದು ಬೈದು ಕೆನ್ನೆಯ ಮೇಲೆ ಹೊಡೆದ ಎಂದರೆ ಸರಿಯಲ್ಲ ಆಗ ನಾನು, ಮತ್ತು ನನ್ನ ಮಕ್ಕಳಾದ ಚಾ.ಸಾ.1 ಮತ್ತು 10 ಸೇರಿ ಜಗಳದ ಬಗ್ಗೆ 1 ನೇ ಆರೋಪಿತನಿಗೆ ಕೇಳುತ್ತಿದ್ದಾಗ ಅಲ್ಲಿಯೇ ಇದ್ದ 2 ಮತ್ತು 3 ನೇ ಆರೋಪಿತರು ನಮಗೆ ದೂಡಾಡಿದರು ಎಂದರೆ ಸರಿಯಲ್ಲ ಹಾಗೂ 1 ನೇ ಆರೋಪಿತರು ನನ್ನ ಮಗ ಚಾ.ಸಾ.8 ರವರ ಮೂಗಿಗೆ ಮುಷ್ಟಿಯಿಂದ ಹೊಡೆದರು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಸೇರಿ ನನಗೆ ದೂಡಾಡಿ, ನನ್ನ ಕೈ ತಿರುಗಿಸಿ ಹೊಡೆದು, ನನ್ನ ಮಾನಕ್ಕೆ ಕುಂದುಂಟಾಗುವಂತೆ ಮಾಡಿದರು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ಚಾ.ಸಾ.1 ರವರಿಗೆ 1 ರಿಂದ 3 ನೇ ಆರೋಪಿತರು ಸೇರಿ ಕೈಯಿಂದ ಹೊಡೆದು, ಅವನು ಧರಿಸಿದ ಅಂಗಿಯನ್ನು ಹರಿದರು ಎಂದರೆ ಸರಿಯಲ್ಲ. ಪೆಟ್ಟು ತಿಂದ ನನ್ನ ಮಗ ಚಾ.ಸಾ.8 ಹಾಗೂ ನನಗೆ ಉಪಚಾರದ ಕುರಿತು ಮುಂಡಗೋಡದ ಸರಕಾರಿ ಆಸ್ಪತ್ರೆಗೆ ಚಾ.ಸಾ.10 ರವರು 108 ವಾಹನದಲ್ಲಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಹಾಗೂ ನನ್ನ ಮಗ ಚಾ.ಸಾ.8 ಮೋಟಾರ್ ಬೈಕ್ ಮೇಲೆ ಹೋಗುತ್ತಿದ್ದಾಗ ಬಿದ್ದು ಪೆಟ್ಟು ಮಾಡಿಕೊಂಡು ಆಸ್ಪತ್ರೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಈ ಕುರಿತಂತೆ ನಾನು ದಿನಾಂಕ 16.05.2019 ರಂದು ನನ್ನ ಹೇಳಿಕೆ ಹಾಗೂ ದಿನಾಂಕ 10.07.2019 ರಂದು ನನ್ನ

ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿ ಮತ್ತು ಮರು ಹೇಳಿಕೆಯನ್ನು ಕ್ರಮವಾಗಿ ನಿ.ಪಿ. 6 ಮತ್ತು 7 ಎಂದು ಗುರುತಿಸಲಾಯಿತು.

3. ಘಟನೆಯ ಕುರಿತಂತೆ ನಾನು ದಿನಾಂಕ 11.02.2020 ರಂದು ಶಿರಸಿಯ ನ್ಯಾಯಾಲಯದಲ್ಲಿ ನಿ.ಪಿ 5 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ಅದು ನನ್ನ ತಪ್ಪು ಕಲ್ಪನೆಯಿಂದ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದ 1 ನೇ ಆರೋಪಿತನು ನನ್ನ ಮಕ್ಕಳಾದ ಚಾ.ಸಾ.1, ಚಾ.ಸಾ.8 ಮತ್ತು 9 ಹಾಗೂ ಒರ್ವ ಮಹಮ್ಮದ್ ತಂದೆ ಕರೀಂ ಸಾಬ್ ಮುಜಾವರ್ ಇವರ ಮೇಲೆ ದೂರು ದಾಖಲಿಸಿದ್ದು, ಅದು ಎಸ್.ಸಿ ನಂಬರ 38/2022 ಆಗಿದ್ದು, ಅದು ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ ಮತ್ತು ಆ ಪ್ರಕರಣದಲ್ಲಿ ಈ ಪ್ರಕರಣದ 1 ರಿಂದ 3 ನೇ ಆರೋಪಿತರು ನಮ್ಮ ಪರವಾಗಿ ಪ್ರತಿಕೂಲ ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿ. ಆದ ಕಾರಣ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಡಿ.ಡಿ.ಕೆ ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ